ವರದಿಯನ್ನು ಒಪ್ಪಿಸುವುದು

ಶ್ರೀ ಬಿ. ಆರ್. ಯಾವಗಲ್ (ಉಪಾಧ್ಯಕ್ಷರು).— ಶಿವಮೊಗ್ಗ ಜಿಲ್ಲೆಯ ತರ್ಲಘಟ್ಟ ಗ್ರಾಮದಲ್ಲಿ ಶ್ರೀ ಚಂದ್ರಪ್ಪ ಎಂಬ ಹರಿಜನ ವ್ಯಕ್ತಿಯ ಮೇಲೆ ನಡೆಯಿತೆನ್ನಲಾದ ದೌರ್ಜನ್ಯದ ಘಟನೆಯ ಬಗ್ಗೆ ಅರ್ಜಿಗಳ ಸಮಿತಿಯ ವರದಿಯನ್ನು ಸದನಕ್ಕೆ ಒಪ್ಪಿಸಬಯಸುತ್ತೇನೆ.

ಅಧ್ಯಕ್ಷರು.— ವರದಿಯನ್ನು ಒಪ್ಪಿಸಲಾಯಿತು.

ಅಧ್ಯಕ್ಷರು.—ಶ್ರೀಮತಿ ಕೆ. ಎಸ್. ನಾಗರತ್ನಮ್ಮ, ಶ್ರೀ ಎಸ್. ಬಂಗಾರಪ್ಪ ಮತ್ತು ಶ್ರೀ ಎಂ. ವೀರಪ್ಪಮೊಯ್ಲಿ, ಶ್ರೀ ಮಹಮದ್ ಲೈಕುದ್ದೀನ ಹಾಗೂ ಶ್ರೀಮತಿ ಮುಕ್ತಾರುನ್ನೀಸಾ ಅವರುಗಳು ಕಳುಹಿಸಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಮಂತ್ರಿಗಳು ಕಾಲಾವಕಾಶವನ್ನು ಕೇಳಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ಕಾರಣವೇನು ? ತಮಗೇನಾದರೂ ಪತ್ರ ಬರೆದಿದ್ದಾರೆಯೆ ?

ಅಧ್ಯಕ್ಷರು — ಪತ್ರ ಬರೆದಿದ್ದಾರೆ. ವಿಧಾನಸಭೆಯಲ್ಲಿ ೨೮-೩-೮೮ ರಂದು ಸೋಮವಾರ ಶ್ರೀಮತಿ ನಾಗರತ್ನಮ್ಮ ಮತ್ತಿತರರ ಗಮನ ಸೆಳೆಯುವ ಸೂಚನೆಗೆ ಉತ್ತರ ನೀಡಬೇಕಾಗಿತ್ತು. ಆದರೆ ಉತ್ತರ ಇನ್ನೂ ದೊರಕದಿರುವ ಕಾರಣ ದಯಮಾಡಿ ಇದನ್ನು ೨೯-೩-೮೮ಕ್ಕೆ ತೆಗೆದುಕೊಳ್ಳಿ ಎಂದು ಕೋರಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ಉತ್ತರ ಬಾರದಿದ್ದರೆ ಸಚಿವರಾದರೂ ಸಭೆಯಲ್ಲಿ ಇರಬೇಕಲ್ಲ,

ಅಧ್ಯಕ್ಷರು. — ನಾಳೆ ಎಂದು ಹೇಳಿದ್ದಾರೆ, ನಾಳೆ ತಮಗೆ ಉತ್ತರ ಕೊಡಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ಇರಬಹುದು. ಆದರೆ ಈ ಕಾರಣವನ್ನು ಮಾನ್ಯ ಮಂತ್ರಿಗಳಾದ ಚಂದ್ರಶೇಖರವರು ಏಕೆ ಇಲ್ಲಿಬಂದು ಕೊಡಲಿಲ್ಲ? ಇಲ್ಲಿಗೆ ಅವರು ಬರಬೇಕಾಗಿತ್ತಲ್ಲ. ಆ ಸದನದಲ್ಲಿ ಏನಾದರೂ ಇದ್ದಾರೆಯೆ ? ಅವರು ಇಲ್ಲಿ ಬರುವುದಕ್ಕೆ ಏನು ತೊಂದರೆ ಇತ್ತು ?

ಅಧ್ಯಕ್ಷರು.— ನೂರಕ್ಕೆ ನೂರೂ ಮಂತ್ರಿಗಳಾಗಲಿ, ನೂರಕ್ಕೆ ನೂರೂ ಸದಸ್ಯರಾಗಲಿ ಇಲ್ಲಿ ಇರಬೇಕೆಂದು ಇಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ. — ವಿಧಾನ ಪರಿಷತ್ತಿನಲ್ಲಿ ಇದ್ದಾರೆಯೆ ? ಅಥವಾ ದೇವೇಗೌಡರ ಹಾಗೆ ರಾಜೀನಾಮೆ ಕೊಟ್ಟಿದ್ದಾರೆಯೆ ?

ಅಧ್ಯಕ್ಷರು.— ರಾಜೀನಾಮೆಯ ವಿಚಾರದಲ್ಲಿ ಆಗಲೇ ಉತ್ತರಿಸಿದ್ದಾರೆ. ಯಾರೂ ರಾಜೀನಾಮೆ ಕೊಟ್ಟಿಲ್ಲವೆಂದು ಹೇಳಿದ್ದಾರೆ.

(ಗೊಂದಲ)

ಅಧ್ಯಕ್ಷರು.— ನಾಳೆ ಬರದಿದ್ದರೆ ನೋಡೋಣ.

ಶ್ರೀ ಧರ್ಮಸಿಂಗ್.— ಸದನದಲ್ಲಿ ಗಮನ ಸೆಳೆಯುವ ಸೂಚನೆಯನ್ನು ಯಾರಾದರೂ ಸದಸ್ಯರು ತಂದರೆ ಸಂಬಂಧಪಟ್ಟ ಮಂತ್ರಿಗಳು.....

ಅಧ್ಯಕ್ಷರು.— ನಾಳೆ ನಿಮಗೆ ಉತ್ತರ ಬರುತ್ತದೆ, ನಾಳೆ ಉತ್ತರ ಕೊಡುವುದಾಗಿ ಮಂತ್ರಿಗಳ ಪತ್ರ ಬರೆದಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ಈ ಮನೆಯ ಸದಸ್ಯೆಯರನ್ನು ಅರೆಸ್ಟ್ ಮಾಡಿದ್ದಾರೆ. ಇದು ಬಹಳ ಗಂಭೀರವಾದ ಪರಿಸ್ಥಿತಿ. ಅಲ್ಲದೇ, ಪ್ರಿವಿಲೇಜ್ ಇಶ್ಯೂ. ಇದರ ಮೇಲೆ ನಾವು ಹಕ್ಕುಚ್ಯುತಿ ಪ್ರಶ್ನೆಯನ್ನು ಎತ್ತಬೇಕಾಗಿತ್ತು. ಇದಕ್ಕೆ ಮುಖ್ಯ ಮಂತ್ರಿಗಳು ಉತ್ತರಿಸಲಿ. ಮಾನ್ಯ ಮಂತ್ರಿಗಳನ್ನು ಕರೆಯಿಸಿ ತಾವು ಛೀಮಾರಿ ಹಾಕಿ. ಮಂತ್ರಿಮಂಡಲಕ್ಕೆ ಛೀಮಾರಿ ಹಾಕಿ.

ಅಧ್ಯಕ್ಷರು.— ನಾಳೆ ಎಂದು ಹೇಳಿದ್ದಾರೆ, ನಾಳೆ ಉತ್ತರ ಕೊಡಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ದಯಮಾಡಿ ಕೇಳಬೇಕು, ಇದು ಗಮನ ಸೆಳೆಯುವ ಸೂಚನೆ ಇಲ್ಲಿ ಏನಂ ಪ್ರಶ್ನೆ ಉದ್ಭವವಾಗಿದೆ ಎಂದರೆ.....

ಅಧ್ಯಕ್ಷರು.— ಉತ್ತರ ಇನ್ನೂ ದೊರಕದಿರುವ ಕಾರಣ ನಾಳೆ ಕೊಡುವುದಾಗಿ ಹೇಳಿ ಪತ್ರ ಬರೆದಿದ್ದಾರೆ. ದಯವಾಡಿ ಕುಳಿತುಕೊಳ್ಳಿ. ನಾಳೆ ಉತ್ತರ ಕೊಡಿಸುತ್ತೇನೆ. ಇದರ ಪ್ರಾಮುಖ್ಯತೆಯನ್ನು ನಾನು ಬಲ್ಲೆ.

ಎಂ.ಎಲ್.ಎ. ಶ್ರೀಮತಿ ಮುಕ್ತರುನ್ನಿಸಾ ಅವರನ್ನು ಮೈಸೂರಿನಲ್ಲಿ ಬಂಧಿಸಿದ ಬಗ್ಗೆ ಪ್ರಸ್ತಾಪ

ಶ್ರೀ ಎಂ. ವೀರಪ ಮೊಯಿಲಿ.— ಮಾನ್ಯ ಸದಸ್ಯಣಿಯವರಾದ ಮುಕ್ತಾರುನ್ನಿಸಾಬೇಗಂ ಕಾರ್ಪೊರೇಟರುಗಳು, ಮೈಸೂರು ಕಾರ್ಪೊರೇಷನ್ ಅಪೊಷಿಷನ್ ಲೀಡರ್ ಅವರನ್ನೆಲ್ಲಾ ಅನ್ಯಾಯವಾಗಿ ಅರೆಸ್ಟ್ ಮಾಡಿ, ಮೈಸೂರಿನಲ್ಲಿ ಪೋಲೀಸ್ ರಾಜ್ಯವನ್ನು ನಿರ್ಮಾಣ ಮಾಡಿದ್ದಾರೆ. ಇದಕ್ಕೆ ಉತ್ತರ ಕೊಡಲು ಏಕೆ ಮಂತ್ರಿಗಳು ತಪ್ಪಿಸಿಕೊಳ್ಳಬೇಕು ? ಅವರಿಗೆ ಏನು ಕಷ್ಟ ಇದೆ ? ಶ್ರೀ ವೈ. ಕೆ. ರಾಮಯ್ಯನವರು ಮಂತ್ರಿ ಶ್ರೀ ಚಂದ್ರಶೇಖರ್‌ರವರು ಈ ಇಬ್ಬರು ಮಂತ್ರಿಗಳು ಇರುವಾಗ ಘಟನೆ ನಡೆದಿದೆ. ವರದಿ ಏನು ಎಂದು ತರಿಸಬೇಕು ? ಮಾನ್ಯ ಮಂತ್ರಿಗಳ ಸಮಕ್ಷಮದಲ್ಲಿ ಅವರ ಹೇಳಿಕೆ ಮೇಲೆ ಇವರ ಅರೆಸ್ಟ್ ಆಗಿದೆ.

ಅಧ್ಯಕ್ಷರು.— ಇವತ್ತು ಸಿ ಗಮನ ಸೆಳೆಯುವ ಸೂಚನೆಗಳಿವೆ. ಅದರಲ್ಲಿ ಇದೂ ಕೂಡ ಮಹತ್ವವಾದುದು, ಗಂಭೀರವಾದುದೆಂದು ಇವತ್ತಿನ ದಿವಸ ಇಟ್ಟಿದ್ದೇವೆ ಇದಕ್ಕೆ ಇನ್ನೂ ಉತ್ತರ ಬಂದಿಲ್ಲ. ನಾಳೆ ಕೊಡಿಸುತ್ತೇನೆ. ನಾಳೆ ಇಡಿ ಎಂದು ಮಂತ್ರಿಗಳು ಪತ್ರ ಬರೆದಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ಮಂತ್ರಿಮಂಡಲ ಕುಸಿದಿದೆ, ಅದು ಕೆಲಸ ಮಾಡುತ್ತಿಲ್ಲ. ಚಟುವಟಿಕೆ ಇಲ್ಲ. ನಾವೇನು ೭-೮ ಮಂತ್ರಿಗಳು ರಾಜೀನಾಮೆ ಕೊಟ್ಟಿದ್ದಾರೆಂದು ಆಘಾತನೆ ಮಾಡಿದ್ದೇವೆ. ಅದು ಸಾಬೀತಾಗುತ್ತಿದೆ.

ಶ್ರೀ ಎ. ಲಕ್ಷ್ಮೀಸಾಗರ್.— ಸುಮ್ಮನೇ ಬರೀ ಮಾತಿನಿಂದ ಏನೂ ಆಗುವುದಿಲ್ಲ.

(ಗೊಂದಲ)

೪-೦೦ ಪಿ. ಎಂ.

ಅಧ್ಯಕ್ಷರು.—ಎಲ್ಲರೂ ಕುಳಿತುಕೊಳ್ಳಿ ಟೈಂ ವೇಸ್ಟ್ ಮಾಡುವುದು ಬೇಡ. ನಾಳೆ ತಮಗೆ ಉತ್ತರ ಕೊಡಿಸುತ್ತೇನೆ.

ಶ್ರೀ ಎಂ ಮಲ್ಲಿಕಾರ್ಜುನ ಖಾರ್ಗೆ.—ನಾವು ಮೊದಲು ಸಂಶಯ ವ್ಯಕ್ತಪಡಿಸಿದ್ದೇವೆ. ಅದರಂತೆ ಸಭೆಯಲ್ಲಿ ವೈ ಕೆ. ರಾಮಯ್ಯನವರು ಇಲ್ಲ, ದೇವೇಗೌಡರು ಇಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರಂ ಹೇಳಿದ ಹಾಗೆ ಕೊಲ್ಯಾಪ್ಸ್ ಆಗಿದೆ ಎನ್ನುವ ಮಾತು ಸರಿ, ಅವರ ಕನಸು ಏನಿತ್ತು ಅದು ಕೊಲ್ಯಾಪ್ಸ್ ಆಗಿದೆ. ಅವರು ಏನೋ ಕನಸು ಕಾಣುತ್ತಿದ್ದರು.

ಶ್ರೀ ಎಂ. ವೀರಪ್ಪ ಮೊಯಿಲಿ.—ಸಿಡಿಲು ಬಡಿದು ಅದರಿಂದ ಚೇತರಿಸಿಕೊಳ್ಳದೆ ತತ್ತರಿಸಿ ಹೋಗಿದ್ದಾರೆ, ಅವರಂ ಇಲ್ಲಿಗೆ ಬರುವುದಕ್ಕೆ ಆಗಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೆ, ಪ್ರಹಾರ ಬಹಳ ದೊಡ್ಡದು. ತತ್ತರಿಸಿದಡಕ್ಕಂತ ಬೀಳುವ ಬದಲು ತೂರಾಡುತ್ತಿದೆ ಈ ಮಂತ್ರಿ ಮಂಡಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಡೆಲ್ಲಿ ಕೂಡ ಅಲುಗಾಡುತ್ತಾ ಇದೆ, ಅದೂ ಸ್ವಲ್ಪ ದಿವಸದಲ್ಲೇ ಹೋಗುತ್ತದೆ.

ಅಧ್ಯಕ್ಷರು.—ಎರಡೂ ಕಡೆ ಜೋಕ್ಸ್ ಸಾಕು.

ಶ್ರೀ ಎಸ್. ಆರ್. ಬೊಮ್ಮಾಯಿ.—೨೪ ಗಂಟೆಗಳಲ್ಲಿ ಒಬ್ಬ ಮಂತ್ರಿಯನ್ನು ತೆಗೆದು ಮತ್ತೊಬ್ಬ ಮಂತ್ರಿಯನ್ನು ಮಾಡುತ್ತಾರೆ. ಮಧ್ಯ ರಾತ್ರಿಯಲ್ಲಿ ಸಭೆ ಕರೆಯುತ್ತಾರೆ.